ಉಚಿತ ಪ್ರತಿ ಕಳಿಸಲ್ಪಡುವುದಿಲ್ಲ.

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 1—8—0
೧ ವರ್ಷಕ್ಕೆ ಕಡಮೆ ಚಂದಾ ತೆಗೆದುಕೊಳ್ಳುವುದಿಲ್ಲ.
ವಿ. ಪಿ. ಪದ್ಧತಿ ಇಲ್ಲ.
ಪ್ರಕಟಣೆ ದರವನ್ನು ಬೇಕಾದವರಿಗೆ ತಿಳಿಸುತ್ತೇವೆ.

Office—Chamaraja Agrahar, Mysore
ಆಫೀಸ್—ಚಾಮರಾಜ ಅಗ್ರಹಾರ, ಮೈಸೂರು

Regd. No. M. 1299

SATYAVADI

"ಸತ್ಯವಾದಿ" ವಾರಪತ್ರಿಕ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು

"SATYAVADI"
OFFERS A
Profitable Medium
For Advertising
Space limited
Rates on enquiry

ಸಂಪುಟ ೭] ಮೈಸೂರು, ಶುಕ್ರವಾರ, ೧೫ನೇ ಮೇ ೧೯೩೫ [ಸಂಚಿಕೆ ೩೧

೧೦೦೦ ರೂಪಾಯಿಗಳ ಬಹುಮಾನ
ಲೋಕಪ್ರಸಿದ್ಧವಾದ
ಸಾಲಾಮಿಸ್ರಿಮಾರಬ್ಬ

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು ತೆಗೆದುಕೊಳ್ಳಿರಿ

ಇದರ ಸೇವನೆಯಿಂದ ವೀರ್ಯವು ನೀರಿನಂತಿದ್ದರೂ ಸ್ವಪ್ನೇಂದ್ರಿಯವಾದರೂ ಸ್ತ್ರೀಸಂಗಕ್ಕೆ ಮೊದಲೆ ಸ್ಖಲನವಾದರು ಮೂತ್ರದೊಂದಿಗೆ ಹೊಗುತ್ತಿದ್ದರೂ, ದೋಷರ ಹಿತವಾಗಿ ಶರೀರಕ್ಕೆ ದಾರ್ಢ್ಯವನ್ನೂ ಆರೋಗ್ಯವನ್ನೂ ಉಂಟುಮಾಡುವದು. ಆದೇರ್ಣ, ಮಲಬದ್ಧತೆ, ಮೆದುಳಿನ ಬಲಹೀನತೆ, ಕೈಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ 'ಸಾಲಾಮಿಸ್ರಿ' ಎಂಬುವುದು ಕಾಬೂಲ್ ಕಾಂದಹಾರ್ ಪ್ರಾಂತ್ಯಗಳಲ್ಲಿ ಬೆಳೆಯುತ್ತದೆ ಈ ಔಷಧದಿಂದ ಗುಣಹೊಂದಿದ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ, ಆಫ್ರಿಕ, ಬರ್ಮ, ಪೀನಾಂಗ್, ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರುಬೇಕಾದರೂ ತರಿಸಿ ನೋಡಬಹುದು. ಇವುಗಳು ನಿಜವು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. 1 ಡಬ್ಬವನ್ನು 15 ದಿವಸ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. ಯಾ 3 ಡಬ್ಬಿಗಳು ಪೂರ್ಣವಾಗಿ ಗುಣವಾಗುವಂತೆ ಪರಾಡುವುವು. ಅನುಪಾನ ಪತ್ರಿಕೆಯು ಸಂಗಡಲೇ ಇರುತ್ತೆ. ಹೆಸರು ವಿಳಾಸ ಸ್ಪಷ್ಟವಾಗಿ ತಿಳಿಯುವಂತೆ ಇರಬೇಕು.

ಕ್ರಯ ಡಬ್ಬಿ 1 ಕ್ಕೆ ರೂ. 2—0—0
ಲು ಖರ್ಚು 1 ರಿಂದ 3 ಡಬ್ಬಿಗಳಿಗೆ 8
ಏಜಂಟರು ಎಲ್ಲಾ ಸ್ಥಳಗಳಲ್ಲಿಯೂ ಆಗಿ ಬೇಕಾಗಿರುತ್ತೆ. ರೂಲ್ಸ್ ತರಿಸಿಕೊಳ್ಳಬಹುದು.

ಸ್—ಮಿಸ್ರಿ, ಬೆಂಗಳೂರು ಸಿಟಿ.
ನ್ನಾಲಾಲ್, ಡೆಲ್ಲಿ ವೈದ್ಯರು,
ಮುರಬ್ಬಾ ಡಿಪೊ,
ಳೂರು ಸಿಟಿ

ಸೀಮೆ ಭಂಗಾತದ ರೇಡಿಯಂ ರಿಸ್ಟ್‌ವಾಚ್



ಚಿತ್ರದಲ್ಲಿ ಕಾಣುವಂತೆಯೇ ಇರುವ ಈ ಗಡಿಯಾರಗಳು ಹೊಸದಾಗಿ ಒಂದಿವೆ. ಈ ಗಡಿಯಾರದ ಕಾಂಪೊಸಿಷ್ಟ್‌ಗಳು ಬಹು ಒಳ್ಳೆಯವು. ಮತ್ತು ಬಲಿಷ್ಟವಾದವು. ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವುದು. ಒಂದು ವೇಳೆ ಹಿಂದು ಮುಂದು ಹೋದರೂ ನಾವೇ ಸರಿಮಾಡಿಕೊಳ್ಳಬಹುದ. ಈ ಗಡಿಯಾರಗಳು ಸ್ವಿಡ್ಜರ್‌ಲ್ಯಾಂಡು ದೇಶದಲ್ಲಿ ತಯಾರಾದುವು ಇತರ ಗಡಿಯಾರಗಳಲ್ಲಿ ರಾತ್ರಿ ವೇಳೆಯಲ್ಲಿ ಗಂಟೆ ನೋಡಬೇಕಾದರೆ ಬೆಳಕು ಬೇಕು. ಈ ಗಡಿಯಾರಗಳಲ್ಲಿ ರಾತ್ರಿ ವೇಳೆಯಲ್ಲಿ ಗಂಟೆ ನೋಡ ಬೇಕಾದರೆ ಬೆಳಕು ಅವಶ್ಯಕವಿಲ್ಲ. ಎಷ್ಟು ಕತ್ತಲೆಯಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಪ್ರಕಾಶವಾಗಿ ಗಂಟೆ ತೋರಿಸುವುದು. ಹಗಲು ವೇಳೆಯಲ್ಲಿ ಸಾಧಾರಣ ಗಡಿಯಾರಗಳಂತೆ ಇರುವುದು.

ಕ್ರಯ ಗಡಿಯಾರ 1 ಕ್ಕೆ ರೂ. 7—8—0
ಬೆಳ್ಳಿ ಗಡಿಯಾರ 1 ಕ್ಕೆ ರೂ. 9—0—0

ಏಳಾಸು—ಗೌರಿ ಅಂಡ್ ಕೋ.,
ನಂ. 39 ಪರಮಾನಂದ ಮೊದಲಿ ಬೀದಿ.
ಮಿಂಟ್ ಪೋಸ್ಟು, ಮದರಾಸ್.

ಹೊಸಮಾದರಿಯ ಊದಬತ್ತಿಗಳು

ಉತ್ತಮವಾದ ಮೂಲಿಕೆಗಳಿಂದಲೂ ಅತ್ತರು ಮೊದಲಾದ ಸಾರಗಳಿಂದಲೂ ಒಡಗೂಡಿ ದೇವತಾ ಪೂಜ್ಯಕ್ಕೆ ಯೋಗ್ಯವಾದ 'ದಶಾಂಗಬತ್ತಿ' ಎಂದಾಗಿ ಪ್ರಸಿದ್ಧಿಹೊಂದಿರುವ ಹೊಸರೀತಿಯ ಊದುಬತ್ತಿಗಳು ನಮ್ಮಲ್ಲಿ ತಯಾರಾಗಿ ಬಿಕರಿಗೆ ಸಿದ್ಧವಾಗಿವೆ ಕ್ರಯ ಸೇರು ೧ ಕ್ಕೆ (ಸುಮಾರು ೬೦೦ ಬತ್ತಿಗಳು) ೩ ರೂಪಾಯಿ ಮಾತ್ರ. ಸರ್ವರೂ ತರಿಸಿ ತನ್ಮೂಲಕ ನಮ್ಮ ಶ್ರಮವನ್ನು ಸಾರ್ಥಕಗೊಳಿಸಬೇಕಾಗಿ ಪ್ರಾರ್ಥನೆ. ನಮ್ಮಲ್ಲಿ ಇನ್ನೂ ಇತರ ವಿಧವಾದ ಹೆಚ್ಚಿನ ಬೆಲೆಯ ಅಂಬರ್ ಕಸ್ತೂರಿಬತ್ತಿಗಳೂ, ಗಂಧದಬಿಲ್ಲೆ ಅರಗಜ, ಪನ್ನೀರು ವಗೈರೆ ಸಹಾ ದೊರೆಯುತ್ತೆ.

ಇದಲ್ಲದೆ ಸಂಜನಗೂಡಿನ ಮಿ|| ಬಿ.ವಿ. ಪಂಡಿತರ ಲೋಕಪ್ರಸಿದ್ಧವಾದ ಸಿದ್ಧೌಷಧಗಳೂ, ಷರಬತ್ತುಗಳೂ, ತೈಲಗಳೂ, ಲೇಹ್ಯಗಳೂ ನಮ್ಮಲ್ಲಿ ಸಿಕ್ಕುತ್ತೆ.

ಸಿ. ಪದ್ಮಯ್ಯ, ಕಮರ್ಷಿಯಲ್ ಹಾಲ್,
ಸಂತೇಪೇಟೆ, ಮೈಸೂರು.

ಸತ್ಯವಾದಿ ಪ್ರೆಸ್ ಮೈಸೂರು

—೦—

ನಾವು ಎಲ್ಲಾ ವಿಧವಾದ ಮುದ್ರಣ ಕೆಲಸವನ್ನು ಸುಲಭ ದರದಿಂದಲೂ, ಸೊಗಸಾಗಿಯೂ, ಸಕಾಲದಲ್ಲಿಯೂ ಮಾಡಿಕೊಡುತ್ತೇವೆ.

MYSORE GOVERNMENT
LOAN BONDS
&
Shares of Prominent
Companies
BOUGHT & SOLD
For particulars apply to:—
THE SEMAH ELISHA COMPANY
MYSORE.

ಮೈಸೂರು ಸರ್ಕಾರಿ ಸಾಲದ ಪತ್ರ
ಮತ್ತು ಕಂಪನಿ ಷೇರುಗಳನ್ನು
ಕೊಂಡುಕೊಳ್ಳುತ್ತೇವೆ
ಮತ್ತು
ಬಿಕರಿ ಮಾಡುತ್ತೇವೆ.

ಸೇಮಾ ಇಲೈಷಾ ಕಂಪನಿ ಮೈಸೂರು.

ಭಾರತಖಂಡದ ಸರ್ವಸ್ವ

ಭರತಖಂಡದ ಪ್ರಖ್ಯಾತ ಕವಯಿತ್ರಿಯರೂ ಉಜ್ವಲ ದೇಶಭಕ್ತೆಯರೂ ಆದ ಶ್ರೀಮತಿ ಸರೋಜಿನಿ ದೇವಿಯರ ಸುಪ್ರಸಿದ್ಧ ಪುಸ್ತಕವಾದ 'ಸೋಲ್ ಆಫ್ ಇಂಡಿಯ' ಎಂಬುದರ ಕನ್ನಡ ಪರಿವರ್ತನ ಕ್ರಯ 1 ಆಣೆ ಒಂದೂವರಾಣೆಯ ಸ್ಟ್ಯಾಂಪನ್ನು ಕಳುಹಿಸಿದರೆ ಒಂದು ಪುಸ್ತಕ ಕಳುಹಿಸಲ್ಪಡುತ್ತದೆ.

—ವಿಳಾಸ—ಸತ್ಯವಾದಿ ಆಫೀಸ್, ಮೈಸೂರು.

ಕಲಾಮಂದಿರಂ, ಬೆಂಗಳೂರು ಸಿಟಿ

ನಮ್ಮಲ್ಲಿ ಎಲ್ಲಾ ವಿಧವಾದ ಪೈಂಟಿಂಗ್ ಎಂಗ್ರೇವಿಂಗ್‌ಮೆಂಟು ಕೆಲಸಗಳೂ, ಚಿತ್ರಪಠಗಳನ್ನು ಬರೆಯುವುದು ಮುಂತಾದ ಕುಶಲವಿದ್ಯೆಗಳು ಉತ್ತಮ ರೀತಿಯಿಂದ ನಡೆಯುತ್ತವೆ. ಮತ್ತು ವಿದ್ಯಾರ್ಥಿಗಳನ್ನು ಕುಶಲವಿದ್ಯೆಗಳಲ್ಲಿ ತಯಾರ್ಮಾಡುವೆವು. ಈ ಒಂದು ತಿಂಗಳವರೆಗೆ 15-12 ಸೈಜು ಎಂಗ್ರೇವಿಂಗ್‌ಮೆಂಟ್ ಮಾಡುವುದಕ್ಕೆ ಕಮ್ಮಿ ಚಾರ್ಜು ಅಂದರೆ 12 ರುಪಾಯಿಗೆ ಮಾಡಿಕೊಡುವೆವು. ಫೋಟೋ ಮತ್ತು ಅರ್ಧ ಹಣ ಕವಾನಿಸಿ.

"ಸತ್ಯವಾದಿ"

೧೫ ನೇ ಮೇ ೧೯೨೫

ಅಸ್ಪೃಶ್ಯತಾ ನಿವಾರಣೆಯ ಅವಾಂತರ

ಮಹಾತ್ಮಾ ಗಾಂಧಿಯವರು ಎಂದು ಭರತಖಂಡ ರಾಜಕೀಯ ಚಳವಳಿಯ ಅಧಿನಾಯಕರಾದರೋ ಅಂದಿನಿಂದಲೇ ಅಸ್ಪೃಶ್ಯತಾ ನಿವಾರಣೆಯ ಸಂದೇಶವನ್ನು ಸಾರತೊಡಗಿರುತ್ತಾರೆ. ಮಾತ್ರವಲ್ಲದೆ ಭರತಖಂಡವು ಸ್ವಾತಂತ್ರ್ಯ ಸುಖವನ್ನು ಪಡೆಯಬೇಕಾದರೆ ಅಸ್ಪೃಶ್ಯತೆಯ ನಿವಾರಣೆಯು ಅಗತ್ಯವಾದುದೆಂದೂ ಇಲ್ಲದಿದ್ದರೆ ಸ್ವಾತಂತ್ರ್ಯವೆಂಬುದು ಸ್ವಪ್ನ ಪ್ರಾಯವೆಂದೂ ಅಪ್ಪಣೆಕೊಡಿಸಿರುತ್ತಾರೆ. ಅದಕ್ಕನುಸಾರವಾಗಿ ಅವರೂ ಅನುಯಾಯಿಗಳನೇಕರು ಎಷ್ಟೊ ಪ್ರಯತ್ನಗಳನ್ನೆಸಗುತ್ತಿರುತ್ತಾರೆ. ಆದರೆ ಇತ್ತೀಚೆಗೆ ರಾಜಕೀಯ ಚಳವಳಿಯ ಮುಂದಾಳುಗಳನೇಕರು ಅವರಾ ಅಸ್ಪೃಶ್ಯತಾನಿವಾರಣೆಯ ವಿಷಯದಲ್ಲಿ ಅತೃಪ್ತರಾಗಿ, ಅದು ರಾಜಕೀಯ ವಿಷಯಗಳಿಂದ ಬೇರೆಯಾದುದೆಂದೂ, ಸಾಮಾಜಿಕ ಅಪಘಾತಕ್ಕೆ ಕಾರಣವಾದುದೆಂದೂ ಹೇಳಲುಪಕ್ರಮಿಸಿರುವರಲ್ಲದೆ, ಮಹಾತ್ಮಾ ಗಾಂಧಿಯವರನ್ನು, ರಾಜಕೀಯ ಪ್ರಕರಣದಲ್ಲಿ ಮತಧರ್ಮಗಳ ಸಮಾವೇಶಮಾಡಕೂಡದೆಂದೂ, ಜಾತಿಸಾಂಕರ್ಯಕ್ಕೆ ಕಾರಣಭೂತರಾಗಕೂಡದೆಂದೂ ಪ್ರಾರ್ಥಿಸಿದ್ದಾರೆ.

ಮಹಾತ್ಮರಾದರೂ ಅಸ್ಪೃಶ್ಯತಾ ನಿವಾರಣೆಗೆ ಅಪರಿಮಿತವಾದ ವ್ಯಾಖ್ಯಾನಮಾಡುತ್ತಾ, ಅಸ್ಪೃಶ್ಯತೆಯನ್ನು ಹೋಗಲಾಡಿಸುವುದೇ ಮುಖ್ಯ ಧರ್ಮವೆನ್ನುತ್ತಲಿರುವರು. ಇದನ್ನು ನೋಡಿ ಹಲಕೆಲವರು ಕರಿನಾಯಿ ಬಿಳಿನಾಯಾಗುವುದೇ ? ಎಂದುಕೊಳ್ಳುತ್ತಲಿರುವರು.

ಹೀಗೆ ರಾಜ್ಯದಲ್ಲಿ ಮುಖಂಡರುಗಳಲ್ಲಿಯೇ ಪರಸ್ಪರ ವಿರೋಧವೂ ವಾಗ್ವಾದವೂ ಅರಂಭವಾಗಿ ಜನಾಂಗದಲ್ಲಿ ದೊಡ್ಡ ಅವಾಂತರವುಂಟಾಗಿಹೋಗಿದೆ!

ಇದೇನು ವಿಪರೀತ! ಭರತಖಂಡದ ವೈಲ್ಲೆಯನ್ನುಂಟುಮಾಡಲು ನಡುಕಟ್ಟಿನಿಂತ ದೇಶಭಕ್ತರು, ದೊಡ್ಡದೊಂದು ಗಲಭೆಯನ್ನುಂಟುಮಾಡಿ, ಭರತಖಂಡವನ್ನು ಮತ್ತೆಯೂ ಕೆಳಕ್ಕೆ ತುಳಿಯುವಂತಾದರೇ!

ಮಹಾತ್ಮರ ಏಕಾಂತ ಅನುಯಾಯಿಗಳಾದ ಡಾ| ವರದರಾಜಲುನಾಯಿಡುರವರು ಅಸ್ಪೃಶ್ಯತಾ ನಿವಾರಣೆಗೆ ನಡುಕಟ್ಟಿ, ಈಚೆಗೆ ಶೂದ್ರನಿಂದ ಬೇಯಿಸಲ್ಪಟ್ಟ ಅನ್ನವನ್ನು ಬ್ರಾಹ್ಮಣನಿಗೆ ಊಟಮಾಡಿಸಲು ಪ್ರಗ್ರಹ ಪೂರ್ವಕ ಶಪಥತೊಟ್ಟಿರುತ್ತಾರೆ ಮಾತ್ರವಲ್ಲದೆ, ತಮ್ಮ ಮತದಂತೆ ನಡೆಯದಿದ್ದುದಾದರೆ ಬ್ರಾಹ್ಮಣ ಪಂಗಡಕ್ಕೇ ಗುರುತರ ಕಷ್ಟವದಗುವುದೆಂದೂ ಹೇಳುತ್ತಾರೆ! ಇದೆಂತಹ ವಿಚಕ್ಷಣತೆ! ಇದೇನು ವೈಪರೀತ್ಯ!

ಇವರಾಕಾರ್ಯವು ದೇಶೋಪಕಾರಿಯೋ? ದೇಶಾಪಕಾರಿಯೋ? ಭರತಖಂಡದ ಏಕ್ಯವನ್ನು ಸಾಧಿಸಲು ಹೋದವರು ಛಿನ್ನವಿಚ್ಛಿನ್ನವಾಗಿ ಮಾಡಿಬಿಡಬಹುದೆ?

ಭಗವಂತನಿಂದಲೇ ಗುಣಕರ್ಮಾನುಸಾರವಾಗಿ ಸೃಷ್ಟಿಸಲ್ಪಟ್ಟು ಅನಾದಿಯಿಂದಲೂ ನಡೆದುಬಂದಿರುವ ಆಚಾರಕ್ರಮಗಳನ್ನು ಹಠಾತ್ತಾಗಿ ಒಂದು ದಿನದಲ್ಲಿ ನಿರ್ನಾಮಮಾಡಿಬಿಡಬಲ್ಲವರಾರು? ಹಾಗೆ ಮಾಡುವುದಾದರೂ ಯಾವ ರಾಜನೀತಿಯಲ್ಲಿ ಹೇಳಿದೆ? ಮಾಡುವುದಕ್ಕೆ ಇವರುಗಳಾದರೂ ಯಾರು? ಲೋಕಕ್ಕೇ ಆಧಾರವೆನಿಸಿದ ಗೀತೆಯನ್ನು ಅನುದಿನವೂ ಪಾರಾಯಣಮಾಡಿ ಕೃತಾರ್ಥರಾಗುತ್ತಿರುವ ಮಹಾತ್ಮಾ ಗಾಂಧಿಯವರಿಗೆ ಇವರೇನು ನಿಜ ಶಿಷ್ಯರೇ? ಮೆಹಾತ್ಮರಾದರೂ ಹೀಗೇಯೇ ಉಪದೇಶಿಸಬಲ್ಲರೇ? ಈರೀತಿ ಮಾಡಿದಮಾತ್ರದಿಂದಲೇ ಸ್ವರಾಜ್ಯ ಸಾಧನೆಯಾಗಿ ಬಿಡುವುದೇ? ಎಂದೆಂದಿಗೂ ಆಗಲಾರದೆಂದು ದೃಢವಾಗಿ ಹೇಳಲು ಸಂದೇಹವೇ ಇರುವುದಿಲ್ಲ.

ಮತ್ತಾದರೋ ಭರತಖಂಡವು ಸನಾತನಧರ್ಮವೆಂಬ ತಳಹದಿಯ ಮೇಲೆನಿಂತಿದೆ. ಎಂದು ಆ ತಳಹದಿಗೆ ಘಾತವುಂಟಾಗುವುದೋ ಆ ಕ್ಷಣವೇ ಭರತಖಂಡದ ಹೆಸರೇ ಭೂಲೋಕದಲ್ಲಿ ಲೋಪವಾಗಿ ಹೋಗುವುದು.

ಸನಾತನಧರ್ಮಾನುಯಾಯಿಗಳಾಗಿ ರಾಷ್ಟ್ರೋದ್ಧಾರಮಾಡಿದ ಲೋಕಪೂಜ್ಯರೂ, ಚತುರಚೂಡಾಮಣಿಗಳೂ ಆದ ಶ್ರೀರಾಮ, ಪ್ರತಾಪ, ಶಿವಾಜಿಗಳಂತಹ ಮಹಾಸತ್ಪುರುಷರು ನಡೆಗೊಂಡ ದಾರಿಯಲ್ಲಿ ಹೋಗಿ ತಮ್ಮಾ ಸ್ವರಾಜ್ಯ ಸಂಪಾದನೆಯ ಧ್ಯೇಯವನ್ನ ಸಾಧಿಸಿ ತಮ್ಮ ಕರ್ತವ್ಯವನ್ನು ಮಾಡುವುದರ ಮೂಲಕ ಕೃತಕೃತ್ಯರಾಗಬೇಕಲ್ಲದೆ ತಮ್ಮದೊಂದೇ ಆದೂರದೃಷ್ಟಿಯಿಂದ ಕೆಲಸಮಾಡಲುಪಕ್ರಮಿಸಿದರೆ, ತಾವೂ ಭ್ರಷ್ಟರಾಗಬೇಕಲ್ಲದೆ, ರಾಷ್ಟ್ರಘಾತದ ಮಹಾಪಾಪಕ್ಕೊಳಗಾಗದಿರಲೆಂದು ಹೇಳಬೇಕಾಗಿದೆ. ಇಂದಿನ ಕಾರ್ಯಕ್ರಮವು ಹೇಗೆ ಪರಿಣಮಿಸುತ್ತಿರುವುದೆಂಬುದನ್ನೂ, ಇವರಿಗೆ ದೂರದೃಷ್ಟಿಯು ಎಷ್ಟು ಮಟ್ಟಿಗೆ ಕಡಮೆಯಾಗಿದೆಯೆಂಬುದನ್ನೂ ವಿವರಿಸಲು ಬಹಳವಾಗುವುದು. ಕ್ರಮವಾಗಿ ಮುಂದೆ ಮುಂದೆ ತಿಳಿಸುವ ಅಭಿಲಾಷೆಯಿಂದ ಈಗ ನಿಲ್ಲಿಸಲಾಗುವುದು

ಒಬ್ಬ ರಜಪೂತ ವೀರಾಂಗನೆಯ ಸಾಹಸ ಕಾರ್ಯ.

'ಸ್ವತಂತ್ರ' ಪತ್ರಿಕೆಯು, ಒಬ್ಬ ರಜಪೂತ ವೀರಾಂಗನೆಯ ಸಾಹಸಿಕಕಾರ್ಯವನ್ನು ಪ್ರಕಟಿಸಿದೆ. 29 ನೇ ಮಾರ್ಚಿ ದಿವಸ ಒಬ್ಬ ರಜಪೂತ ಹೆಂಗಸು ತನ್ನ ೧೧ ತಿಂಗಳ ಮಗುವನ್ನು ೨೦೦ ರೂಪಾಯಿ ನಗದು ೪೦೦ ರೂಪಾಯಿನಷ್ಟು ಒಡವೆಯೊಂದಿಗೆ ಪೂನಾದಿಂದ ದೆಹಲಿಗಾಗಿ ರೈಲಿನಲ್ಲಿ ಹೊರಟಳು. ಹೆಂಗಸರು ಕುಳಿತುಕೊಳ್ಳುವ ಗಾಡಿಯಲ್ಲಿ ಕುಳಿತಿದ್ದಳು. ಚಟ್ನಾಂ ಸ್ಟೇಷನ್ನಿನಲ್ಲಿ ತನ್ನ ಗಾಡಿಯವರೆಲ್ಲ ಇಳಿದು ಬಿಟ್ಟು ಅವಳೊಬ್ಬಳೇ ಪ್ರಯಾಣಮಾಡುತಿದ್ದಳು. ಬ್ಯಾಗ್ರಾಡ್ ಸ್ಟೇಷನ್ನಿನಲ್ಲಿ ಈಕೆಯ ಗಾಡಿಗೆ ಪಕ್ಕದಗಾಡಿಯಲ್ಲಿ ಕುಳಿತಿದ್ದ ಒಬ್ಬ ಪಂಜಾಬಿಯವನು ಈಕೆಯ ಗಾಡಿಗೆ ಪ್ರವೇತಿಸಿದನು. ಅವನಲ್ಲಿ ೧೨ ಅಂಗುಲ ಉದ್ದವಾದ ಒಂದು ಹರಿತವಾದ ಚೂರಿಯಿದ್ದಿತು. ಹಣಕಾಸು ಒಡವೆಗಳನ್ನು ಒಂದು ಬಟ್ಟೆಯಲ್ಲಿ ಭದ್ರವಾಗಿ ಕಟ್ಟಿಟ್ಟುಕೊಂಡಿದ್ದಳು. ಮಗುವು ಇವಳ ಮಗ್ಗುಲಲ್ಲಿ ಮಲಗಿದ್ದಿತು. ಪಂಜಾಬಿಯವನು ಹತ್ತಿರ ಸರಿದುಬಂದು ಹಣ ಮತ್ತು ಒಡವೆಯನ್ನು ಕೊಡೆಂದು ಕೇಳಲು ಈಕೆಯು ಕೊಡದಿರಲು ಆಗಂತುಕನು ಅಲ್ಲಿ ಮಲಗಿದ್ದ ಮಗುವನ್ನು ತೆಗೆದು ಕೊಂಡು ಕಿಟಿಕಿಯಿಂದಾಚೆಗೆ ಎಸೆದುಬಿಟ್ಟನು. ಕೆಲವು ನಿಮಿಷಾನಂತರ ಹೊರಗೆ ಪಕ್ಕದಗಾಡಿಯವರಾದರೂ ತನ್ನ ಕೃತ್ಯವನ್ನು ನೋಡುವರೋ ಎಂದು ಕಿಟಿಕಿಯಲ್ಲಿ ಬಗ್ಗಿ ನೋಡುತಿದ್ದನು. ಆಗ ಈ ಹೆಂಗಸು ಅವನು ಸಮೀಪದಲ್ಲಿಟ್ಟಿದ ಚೂರಿಯನ್ನು ತೆಗೆದು ಕೊಂಡು ಅವನನ್ನು ತಿವಿದು ಕೊಂದಳು. ಕೂಡಲೆ ಸರಪಣಿಯನ್ನೆಳೆಯಲು ರೈಲು ನಿಂತಿತು. ಈ ಪಂಜಾಬಿಯವನು ತನ್ನನ್ನು ಪೂನಾದಿಂದಲೂ ಹಿಂಬಾಲಿಸುತಿದ್ದನೆಂದು ರೈಲಿನವರಿಗೆ ತಿಳಿಸಿದಳು. ರೈಲನ್ನು ಹಿಂದಕ್ಕೆ ತೆಗೆದುಕೊಂಡುಹೋಗಿ ಸತ್ತಿದ್ದ ಮಗುವಿನ ದೇಹವನ್ನು ತೆಗೆದುಕೊಂಡು ಎರಡು ಶವಗಳನ್ನೂ ಪೋಲೀಸು ಸುಪರ್ದು ಮಾಡಿದೆರು.

ವೃತ್ತಾಂತ ಸಂಗ್ರಹ

ಕುಂಭಕೋಣದ ಸ್ವೇಷನರಿ ವ್ಯಾಪಾರಸ್ಥರೆಲ್ಲಾ ಸೇರಿ ಒಂದು ಸಂಘವನ್ನೇರ್ಪಡಿಸಿ ಕೊಂಡಿರುವರು. ಈ ಸಂಘದ ಮೀಟಿಂಗು ಪ್ರತಿ ತಿಂಗಳ ೧೫ರಲ್ಲಿ ನಡೆಯುವಂತೆಯೂ, ಆ ದಿವಸ ತಮ್ಮ ಅಂಗಡಿಗಳ ರಜವನ್ನು ಆಚರಿಸತಕ್ಕದ್ದೆಂದೂ, ಮತ್ತು ವ್ಯಾಪಾರವು ಸರಿಯಾಗಿ ನಡೆಯಲು, ಎಲ್ಲರೂ ಪದಾರ್ಥಗಳ ಧಾರಣೆಯನ್ನು ಒಂದೇ ರೀತಿಯಾಗಿ ಇಟ್ಟು ಬಿಕರಿ ಮಾಡಬೇಕೆಂದು ತೀರ್ಮಾನಿಸಿರುತ್ತಾರೆ.

ಪೋಸ್ಟು ಕಾರ್ಡುಗಳ ಮತ್ತು ಕವರುಗಳ ದರ ಹೆಚ್ಚಿಸಿದ ತರುವಾಯ ಅವುಗಳ ವಾಡಿಕೆಯು ಕಮ್ಮಿಯಾದುದನ್ನು ಕೆಳಗೆ ಕಂಡಂತೆ ತಿಳಿಯಬಹುದು.
೧೯೨೦—೨೧ ವರ್ಷ ಮೊದಲು ೬೧೨೨೧೩೫೮೭೬ ಕವರುಗಳು. ೬೫೧೪೦೪೪೭೨ ಕಾರ್ಡುಗಳು.
೧೯೨೨—೨೩ ದರಹೆಚ್ಚಿದಸಂತರ ೫೧೨೧೫೮೭೦೬೭ ಕವರುಗಳು ೫೨೩೬೨೩೪ ಕಾರ್ಡುಗಳು.

ನೇಪಾಲದ ಮಹಾರಾಜರವರು ತಮ್ಮ ದೇಶದಲ್ಲಿ ಗುಲಾಮರನ್ನು ಮಾರುವ ಪದ್ಧತಿಯನ್ನು ನಿಲ್ಲಿಸಲು ಹಿಂದೆ ೧೪ ಲಕ್ಷ ರೂಪಾಯಿ ವ್ಯಯಮಾಡಿದರು ಈ ಕಾರ್ಯಕ್ಕೆ ಇನ್ನೂ ೩೯ ಲಕ್ಷ ಸ್ಯಾಕ್ಷನ್ ಮಾಡಿರುತ್ತಾರೆ.

ಮದ್ರಾಸು ಹೈ ಕೋರ್ಟಿನ ಪಾರ್ಟ್‌ಹ್ಯಾಂಡ್ ರಿಪೋರ್ಟರಾದ ಮ| ವೆಂಕಟರಾಮನ್‌ರವರು ಒಂದು ನಿಮಿಷಕ್ಕೆ ೨೦೦ ಮಾತುಗಳನ್ನು ಬರೆದುಕೊಳ್ಳಾಗಿ ಸ್ಪೋರ್ಟ್‌ಅನ್‌ಡುಪ್ಲೊಯ್ಡ್ ಪಾರ್ಟ್‌ಹ್ಯಾಂಡ್ ಚಿನ್ನದ ಬಿರುದು ಬಿಲ್ಲೆಯನ್ನು ಪಡೆದಿರುತ್ತಾರೆ.

—ಮದರಾಸಿನಲ್ಲಿ ಪ್ರಕಟವಾಗುವ 'ಸ್ವರಾಜ್ಯ' ಎಂಬ ಪತ್ರಿಕೆಯ ರಾಜಮಹೇಂದ್ರಿಯ ಬಾತ್ಮೀದಾರರಾದ ಶಿವರಾಮಕೃಷ್ಣಯ್ಯನವರು ತಾವು ಗೋದಾವರೀ ನದಿಯಲ್ಲಿ ತೇಲುತ್ತಿಲ್ಲದವರನ್ನು ನೋಡಿದೆವೆಂದು ಸದರಿ ಪತ್ರಿಕೆಗೆ ತಂತಿ ಕಳುಹಿಸಿದರೆಂದು ಆ ಪತ್ರಿಕೆಯಲ್ಲಿ ಪ್ರಕಟವಾಗುವಂತೆ ಮಾಡಿ ನವೆರಿಗೆ ಆ ವಿಷಯವೆನ್ನು ತಿಳಿಸಲಿಲ್ಲವೆಂದು ನವರು ಕೇಸುಮಾಡಿದರು. ಅದರ ಮೆ ಹೇಂದ್ರದ ಸಬ್ ಡಿವಿಜ್ಞ ಮ್ಯಾಜಿ ನಿಗೆ 30 ರೂಪಾಯಿ ಜುಲ್ಮಾನೆ ಇದು ಹೈಕೋರ್ಟಿನಲ್ಲಿ ಖಾಯಂ

ಬರೋಡಾ ಸುಂದರಿ

ಅಪಹರಣೆ ವೊಳಿದ್ದಮೆ

ಪೋಲೀಸ್ ಇನ್ಸ್ಪೆಕ್ಟರಿನ ಅತ್ಯಾಚಾರ

ಬರೋಡ ಸುಂದರಿ ವೊಕದ್ದಮೆಯು ಕಲ್ಕತ್ತಾ ಹೈಕೋರ್ಟಿನಲ್ಲಿ ತಸಬೆಯಾಗಿ ಪುನರ್ವಿಚಾರಣೆಗೆ ಆರ್ಡರಾಗಿ ವೊಕದ್ದಮೆಯು ರಂಗಪುರದ ಡಿಸ್ಟ್ರಿಕ್ಟು ಮತ್ತು ಸೆಷನ್ಸ್ ಜಡ್ಜಿಗಳಾದ ಮೆ|| ಎಚ್. ಕೆ. ಬೋಸ್‌ರವರ ಮುಂದೆ ನಡೆಯುತ್ತಾ ಇದೆ.

ತನಗೆ ಕೇಳಿದ ಕೆಲವು ಪ್ರಶ್ನೆಗಳಿಗೆ ಪ್ರತ್ಯುತ್ತರವಾಗಿ ಈ ಸುಂದರಿಯು ತಾನು ಜಪಾನುದಾರನ ಮನೆಯಲ್ಲಿ ಆಶ್ರಯಹೊಂದಿದ್ದೂ ಮತ್ತು ಪೋಲೀಸು ಇನ್ಸ್ಪೆಕ್ಟರನು ತನ್ನಮೇಲೆ ನಡೆಸಿದ ಅತ್ಯಾಚಾರವನ್ನೂ ಬಹಳ ಸಂಕಟದಿಂದ ಹೇಳಿದಳು.

ಕಳೆದ ತಿಂಗಳು 16 ನೇ ತಾರೀಖು 11 ಗಂಟೆಗೆ ಸರಿಯಾಗಿ ಈ ವೊಕದ್ದಮೆಯು ರಂಗಪುರದ ಅಡಿಷನಲ್ ಡಿಸ್ಟ್ರಿಕ್ಟು ಮತ್ತು ಸೆಷನ್ ಜಡ್ಜಿಗಳಾದ ಮೆ|| ಎಚ್. ಕೆ. ಬೋಸ್‌ರವರ ಮುಂದೆ ವಿಚಾರಣೆಗೆ ಆರಂಭವಾಯಿತು.

ಪಬ್ಲಿಕ್ ಪ್ರಾಸಿಕ್ಯೂಟರವರು ಈ ರೀತಿ ಪ್ರಶ್ನೆ ಮಾಡಿದರು. ಇವುಗಳಿಗೆ ಸುಂದರಿಯು ಕೊಟ್ಟ ಉತ್ತರವನ್ನೂ ಸಹ ಇದರಡಿ ಪ್ರಕಟಿಸಿರುವೆವು.

ಪ್ರ—ಒಳ್ಳೆಯದು, ಅಮಲಗಾಜಿಗೆ ಬಂದನಂತರ ನೀನು ನೇರವಾಗಿ ನಿನ್ನ ಮನೆಗೆ ಹೋದೆಯೋ ?

ಉ—ಇಲ್ಲ, ನಾವು ಆ ಸ್ಥಳದ ಜಮೀನುದಾರನಾದ ಗೋರ್ ವಿನೋದ ಬಾಬುಯವರ ಮನೆಗೆ ಹೋದೆವು.

ಪ್ರ—ನೀನು ಅಲ್ಲಿ ಯಾರನ್ನಾದರೂ ನೋಡಿದೆಯೋ ?

ಉ—ಕಚೇರಿಯ ಆವ್ಲುಗಳನ್ನೂ ಮತ್ತು ಬಾಬುವಿನ ಲೈಬ್ರರಿಯಲ್ಲಿದ್ದ 'ಪ್ರಭು'ವನ್ನು ನೋಡಿದೆನು.

ಪ್ರ—" ಪ್ರಭು " ಯಾರು ?

ಉ—ಸೀತಾನಾಥ ಗೋಸ್ವಾಮಿ.

ಪ್ರ—ಅವನು ನಿನ್ನನ್ನೇನಾದರೂ ಪ್ರಶ್ನೆ ಮಾಡಿದನೋ ?

ಉ—ಅಹುದು, ನಾನು ಇಷ್ಟುದಿನಗಳೂ ಎಲ್ಲಿದ್ದೆನೆಂದು ಕೇಳಿದ್ದಕ್ಕೆ ನಾನು ನನ್ನನ್ನು ಅಪಹರಿಸಿಕೊಂಡು ಹೋದುದನ್ನೂ ನನ್ನಮೇಲೆ ಅತ್ಯಾಚಾರ ನಡೆಸಿದುದನ್ನೂ ವಿಸ್ತಾರವಾಗಿ ಹೇಳಿದೆನು. ಮತ್ತು ನನ್ನನ್ನು ಅಪಹರಿಸಿಕೊಂಡು ಹೋದ ಕೆಲವು ದುರಾಚಾರಿ ಹೆಸರನ್ನೂ ತಿಳಿಸಿ ಅವರ ಹಿಂಸೆಯಿಂದ ನನ್ನ ದೇಹದ ಕೆಲವು ಭಾಗಗಳಲ್ಲಿ ಉಂಟಾದ ಗಾಯವನ್ನೂ ತೋರಿಸಿದೆನು.

ಪ್ರ—ಸಬ್ ಇನ್ಸ್ಪೆಕ್ಟರನು ಅಮಲಗಾಜಿಗೆ ಯಾವಾಗ ಬಂದನು ?

ಉ—ಸೋಮವಾರ ಮಧ್ಯಾಹ್ನ 3 ಗಂಟೆಗೆ ಬಂದನು ಅವನು ನಿನ್ನ ಹೇಳಿಕೆ ಬರೆದುಕೊಂಡನೋ ಇಲ್ಲವೋ. ನಾನು ನನ್ನ ಶರೀರದಲ್ಲಿದ್ದ ಗಾಯವನ್ನೂ ಮತ್ತು ನಾನು ಆ ಕಾಲದಲ್ಲಿ ಉಟ್ಟಿದ್ದ ಸೀರೆಯನ್ನೂ ತೋರಿಸಿದೆನು.

ಪ್ರ—ಅವನು ನಿನ್ನನ್ನೆಲ್ಲಾದರೂ ಕಳುಹಿಸಿದನೋ ?

ಉ—ನನ್ನನ್ನು ವೈದ್ಯನು ಪರೀಕ್ಷಿಸುವುದಕ್ಕೆ 'ಗೈ ಬಂದಕ್ಕೆ ಕಳುಹಿಸಿದನು. ನಾನುಹೆಂಗಸರ ವಾರ್ಡಿನಲ್ಲಿ 8 ದಿನಗಳಿದ್ದೆನು.

ಪ್ರ—ನೀನು ನಿನ್ನ ಮನೆಗೆ ಹೋಗಲು ಏತಕ್ಕೆ ಇಷ್ಟಪಡಲಿಲ್ಲ ?

ಉ—ಅಲ್ಲಿ ನಮಗೆ ಅಪಾಯ ಸಂಭವಿಸುವುದೆಂದು ಶಂಕಿಸಿದೆವು. ಬಾಬುವು ಸ್ಥಳದ ಜಮೀನುದಾರನಾದುದರಿಂದ ಅವನ ಮನೆಯಲ್ಲಿ ನಮಗೇನೂ ಹೆದರಿಕೆಯಿರಲಿಲ್ಲ. ಅಲ್ಲಿಯೇ ಒಂದು ವಾರದವರೆಗೂ ಇದ್ದೆವು. " ಪಲಾಷ್‌ಜಾರಿ ಪೋಲೀಸು ಸ್ಟೇಷನ್ನಿಂದ ಇಬ್ಬರು ಕಾನಸ್ಟೇಬಿಲರು ನಮ್ಮ ಮನೆಯನ್ನು ಉಸ್ತುವಾರಿ ನೋಡುವುದಕ್ಕೆ ಭರುವವರೆಗೂ ನಾವು ನಮ್ಮ ಮನೆಗೆ ಹೋಗಲಿಲ್ಲ.

ಪ್ರ—ನೀನು ಪಲಾಷ್‌ಜಾರಿ ಪೋಲೀಸು ಸ್ಟೇಷನ್ನಿಗೆ ಹೋದೆಯೋ ?

ಉ—ಮಾರನೆಯ ಬುಧವಾರ ಹೋದೆನು ಅದೇ ದಿನ ಬೆಳಿಗ್ಗೆ ಪೋಲೀಸು ಸ್ಟೇಷನ್ನಿನ ಸಮೀಪದಲ್ಲಿ " ಜೋಟ ಬಂಗಲೆ " (ವಿಶ್ರಾಂತಾಲಯ) ಯಲ್ಲಿ ಇಳಿದುಕೊಂಡಿದ್ದ ಪೋಲೀಸು ಇನ್ಸ್ಪೆಕ್ಟರನು ನನ್ನನ್ನೂ ನನ್ನ ಗಂಡನನ್ನೂ ನೋಡಬೇಕೆಂದು ಒಬ್ಬ ಕಾನಸ್ಟೇಬಿಲನ ಕೈಯಲ್ಲಿ ಒಂದು ಚೀಟಿಯನ್ನು ಬರೆದು ಕಳುಹಿಸಿದನು.

— ಇನ್ಸ್ಪೆಕ್ಟರಿನ ವಿಜಾತೀಯವಾದ ಹ್ಯಂ '—

ಪಲಾಷ್‌ಜಾರಿ ಪೋಲೀಸು ಸ್ಟೇಷನ್ನಿನಲ್ಲಿ ನಡೆದ ವಿಷಯವಾಗಿ ಕೇಳಲು ಕೇಶವನು, ಸುಂದರಿಯನ್ನು ಬಿಡಿಸಿಕೊಂಡು ಬಂದು ಬಂದು ವಾರದ ಮೇಲೆ ಪಲಾಷ್‌ಜಾರಿ ಪೋಲೀಸು ಸ್ಟೇಷನ್ನಿನ ಸಮೀಪದಲ್ಲಿದ್ದ ವಿಶ್ರಾಂತಿಗೃಹದಲ್ಲಿಳಿದುಕೊಂಡಿದ್ದ ಹೇಮಚಂದ್ರ ಇನ್ಸ್ಪೆಕ್ಟರಿನಿಂದ ಒಂದು ಕಾಗದವನ್ನು ತೆಗೆದುಕೊಂಡು ಒಬ್ಬ ಕಾನ್ಸ್ಟೇಬಿಲನು ಅಮಲಗಾಜಿಗೆ ಬಂದನು ಆ ಕಾಗದದ ಪ್ರಕಾರ ತಾನೂ ತನ್ನ ಹೆಂಡತಿ ಸುಂದರಿಯೂ ಮತ್ತು ಕೆಲವು ಸಾಕ್ಷಿಗಳೂ ಪಲಾಷ್‌ಜಾರಿ ಸ್ಟೇಷನ್ನಿಗೆ ಹೋದೆವು. ತಾವು ಅಲ್ಲಿಗೆ ಹೋಗಿ ಸೇರುವ ಹೊತ್ತಿಗೆ ಸಾಯಂಕಾಲವಾಗಿ ವೊಬ್ಬು ಕತ್ತಲೆ ಕವಿದಿದ್ದಿತು. ಆ ಕೂಡಲೆ ನಮ್ಮನ್ನು ಒಬ್ಬ ಕಾನಿಸ್ಟೇಬಲನು ಇನ್ಸ್ಪೆಕ್ಟರು ಇರುವಲ್ಲಿಗೆ ಕರೆದುಕೊಂಡು ಹೋದನು. ಸುಮಾರು ೮-೯ ಗಂಟೆ ಸಮಯದಲ್ಲಿ ನನ್ನನ್ನೂ ಮತ್ತು ನನ್ನ ಹೆಂಡತಿಯು ಹೊರತು ಮಿಕ್ಕವರನ್ನೆಲ್ಲಾ ಕಳಿಸಿ ಬಿಟ್ಟನು. ಸ್ವಲ್ಪ ಹೊತ್ತಾದ ನಂತರ ನನ್ನನ್ನೂ, ನೀನು ಹೋಗಿ ಸ್ಟೇಷನ್ನಿನಲ್ಲಿ ಕಾದಿರು ಎಂದು ಕಳುಹಿಸಿಬಿಟ್ಟನು.

ಇಂತಹ ವಿಜಾತೀಯವಾದ ಆರ್ಡರಿಗೆ ಕಾರಣವೇನೆಂದು (ಕೇಶವನು) ಇನ್ಸ್ಪೆಕ್ಟರನ್ನು ಕೇಳಲು, ಆತನು ಬರೋಡೆ ಸುಂದರಿಯಿಂದ ಕೆಲವು ಮುಖ್ಯವಾದ ವಿಷಯಗಳನ್ನು ತಿಳಿದುಕೊಳ್ಳುವುದಿದೆಯೆಂದೂ ಈ ವಿಷಯವನ್ನು ಕುರಿತು ನಿಮ್ಮ ಮುಂದೆ ಪ್ರಶ್ನೆ ಮಾಡುವುದು ಸರಿಯಲ್ಲವೆಂದೂ ಹೇಳಿದನು. ರುಕ್ಮಿಣೀನೆಂಬ ದರೋಗನೂ ಮತ್ತು ಒಬ್ಬ ಕಾನಸ್ಟೇಬಲನೂ ಕೊಟಡಿಯಲ್ಲಿದ್ದರು. ನಾನು ಆ ಮನೆಯನ್ನು ಬಿಟ್ಟು ಸ್ಟೇಷನ್ನಿಗೆ ಹೊರಟು ಬಂದೆನು. ಸಮರಾತ್ರಿ ಸುಮಾರು ಒಂದು ಗಂಟೆ ಸಮಯದಲ್ಲಿ ಸುಂದರಿಯು ಬಬ್ಬ ಕಾನಿಸ್ಟೇಬಲಿನ ಜೊತೆಯಲ್ಲಿ ಸ್ಟೇಷನ್ನಿಗೆ ಬಂದು, ತನಿಸ್ಪೆಕ್ಟರನು ತಾನು ಎಷ್ಟು ಕೇಳಿಕೊಂಡರೂ ಕೇಳದೆ ಬಲಾತ್ಕಾರವಾಗಿ ತನ್ನ ಸತೀತ್ವವನ್ನು ನಾಶಪಡಿಸಿದನೆಂದು ಹೇಳಿದಳು. ಬೆಳಗಾಗುವವರಿಗೂ ನಾವು ಪೋಲೀಸು ಸ್ಟೇಷನ್ನಿನಲ್ಲೆ ಇದ್ದು ಅಮಲಗಾಜಿಗೆ ಹಿಂದಿರುಗಿ ಬಂದೆವು ಸುಂದರಿಯ ಅಪಹರಣೆಗೆ ಹಿಂದೆ ನಡೆದ ಸಂಗತಿ ವಿಷಯವನ್ನು ಕುರಿತು ಪ್ರಶ್ನೆ ಮಾಡಲು, ಕೇಶವನು ಇದಕ್ಕೆ ಹಿಂದೆ ಎರಡು ಸಂಗತಿಗಳು ನಡೆದವೆಂದು ಹೇಳಿದನು. ಫಾಲ್ಗುಣ ಮಾಸದ ಒಂದು ರಾತ್ರಿ ನಾನು ಕೆಲವು ಜನರನ್ನು ನನ್ನ ಮಲಗುವ ಕೊಟಡಿಯ ಹಿಂಭಾಗದಲ್ಲಿ ನೋಡಿದೆನು. ಇವರನ್ನು ನೋಡಿದ ಕ್ಷಣವೇ ನಾನು ಗದ್ದಲಹಚ್ಚಲು ಅವರು ಓಡಿಹೋದರು. ಎರಡನೆಯದು ಮೇಲೆ ಹೇಳಿದ ಕೃತ್ಯವು ನಡೆಯುವುದಕ್ಕೆ ಒಂದು ವಾರಕ್ಕೆ ಹಿಂದೆ 'ವಕುಳಗಾರಿ' ಎಂಬ ಸ್ಥಳದಲ್ಲಿ ನಾವು ವರುಣ ಸ್ನಾನಕ್ಕೆ ಹೋದಾಗ ನಡೆಯಿತು. ಅಲ್ಲಿ ಕೆಲವು ಕ್ರೂರಾತ್ಮಿಗಳು ನಾವು ಅಲ್ಲಿಯೇ ಆ ರಾತ್ರಿ ತಂಗುತ್ತೇವೆಯೇ ಇಲ್ಲವೇ ಎಂಬ ಸಂಗತಿಯನ್ನು ವಿಚಾರಿಸುತ್ತಿದ್ದಾರೆಂದು ವಿನೋದನೆಂಬುವನಿಂದ ತಿಳಿದುಕೊಂಡೆವು. ಈ ಸಮಾಚಾರ ಕೇಳಿದೊಡನೇ ನಮಗೆ ಭೀತಿಯುಂಟಾಗಿ ನಾವು ಆ ದಿನವೇ ಹಿಂದಿರುಗಿ ಮನೆಗೆ ಬಂದು ಬಿಟ್ಟೆವು. ಬರುತ್ತಾ ಮಾರ್ಗದಲ್ಲಿ ಕಾಮಪುರದ ಸಂತೆಕೂಡುವ ಸ್ಥಳದಲ್ಲಿ ಕುಳಿತಿದ್ದ 10-12 ಜನರನ್ನು ನೋಡಿದೆವು. ಅವರಲ್ಲಿ ಈ ಕೆಲವು ಅಪರಾಧಿಗಳು ಇದ್ದರು.

(ಸಶೇಷ)

ಮೈಸೂರು ರೈಲ್ವೆ ಏಜೆಂಟರವರ ಕೋರಿಕೆಯಂತೆ ೩ ಜನರನ್ನು ಡ್ರೈವರುಗಳಾಗಿ ತಯಾರ್ಮಾಡ ಬಹುದೆಂದು ಸರ್ಕಾರದವರು ಒಪ್ಪಿರುತ್ತಾರೆ.

ಮಂಡ್ಯದ ಕೊನೇರಹಳ್ಳಿ ಪಂಚಮರು ಅಲ್ಲಿಯ ಕೆರೆಯಿಂದ ನೀರು ಪಡೆಯಬಹುದೆಂದು ಅಮಲ್ದಾರರ ಆರ್ಡರ್ ಆಗಿದೆಯೆಂದು ಬಂದ ವಾರ್ತೆ.

ಬೆಂಗಳೂರಿಂದ ಇಬ್ಬರು ಸ್ಕಾಟುಗಳು ಬೈಸಿಕಲ್ಲಿನಲ್ಲಿ ದಕ್ಷಿಣ ಇಂಡಿಯಾವನೆಲ್ಲಾ ಸುತ್ತಿಕೊಂಡು ಬರಲು ಹೊರಟಿದಾರೆ.

ಮುಂದಿನ ಮೈಸೂರು ನ್ಯಾಯವಿಧಾಯಕ ಸಭೆ ವಿುಟಿಂಗು ಬರುವ ತಿಂಗಳು ೧೭ರಿಂದ ಬೆಂಗಳೂರಿನಲ್ಲಿ ಪ್ರಾರಂಭವಾಗುತ್ತೆ.

ಈ ವರ್ಷ ಫೆಬ್ರವರಿ ತಿಂಗಳಲ್ಲಿ ಇಂಡಿಯಾ ದೇಶದಲ್ಲಿ ಒಟ್ಟು ೬೨,೦೦೦೦೦ ಪೌಂಡು ನೂಲೂ, ೩೫.೦೦೦೦೦ ಪೌಂಡು ನೇಯಿದ ಪದಾರ್ಥಗಳು ತಯಾರಾಗಿವೆ.

ಮದ್ರಾಸಿನಲ್ಲಿ ಈಚೆಗೆ ನಡೆದ ಪೋಸ್ಟು ಮೆಂಬ್ಯೂನಿಯೆನ್ನಿನ ವಿುಟಿಂಗಿನಲ್ಲಿ, ತಮಗೆ ಕಾಕಿ ರುಮಾಲಿನ ಬದಲು, ಮದ್ರಾಸಿನ ಕೆಂಪು ಕಲಾಪತ್ತಿನ ರುಮಾಲನ್ನು ಕೊಡಿಸ ಬೇಕೆಂದು ಪೋಸ್ಟು ಮಾಸ್ಟರ್ ಜನರಲ್‌ರವರನ್ನು ಪ್ರಾರ್ಥಿಸಬೇಕೆಂದು ಠರಾವಾಯಿತು.

ರೈಲ್ವೆ ಲೈನನ್ನು ಅಡ್ಡವಾಗಿ ದಾಟಿದ್ದಕ್ಕಾಗಿ ಅಕ್ರಮ ಪ್ರವೇಶಕ್ಕಾಗಿ ಮದ್ರಾಸಿನ ಪ್ರೆಸಿಡೆಂಸಿ ೩ನೇ ಮ್ಯಾಜಿಸ್ಟೇಟರು ೪ ಜನರಿಗೆ ೮ ಆಣೆಯಂತೆ ಜುಲ್ಮಾನೆ ಹಾಕಿದರು.

TO LET

to

Permanent Advertisers

To Popularise your Business

in the Karnataka Provinces

YOU MUST ADVERTISE IN

the "SATYAVADI"

BECAUSE

It is the cheapest and most up-to-date Karnatic Weekly

It is read largely and widely

It is circulated among all grades of persons

It offers a profitable medium for advertising

Advertisement in this Paper means an investment

Your Advertisement is Solicited

RATES of ADVERTISEMENTS

	1 clm	½ clm	¼ clm	1 inch
1 year	Rs 100	55	30	12
6 months	55	30	17	7
3 months	30	17	9	4
1 month	11	6	4	1-8-0
1 insertion	3	2	1-4-0	0-8-0

Advertisement charges are strictly payable in advance. One column measures about 13"×2½". 3columns to a page. Voucher copy supplied free.

All communications & remittances to be addressed to

The Manager,
SATYAVADI Office,
Mysore, S. India.

ಇಂಡಿಯಾ ಪ್ರಾವಿಡೆಂಟ್ ಕಂಪೆನಿ, ಲಿಮಿಟೆಡ್

ಸುಪ್ರಸಿದ್ಧವಾದ ಈ ಕಂಪೆನಿಯು ಕಲ್ಕತ್ತಾದಲ್ಲಿ 1910 ರಲ್ಲಿ ಸ್ಥಾಪಿತವಾದುದು. ಕಂಪೆನಿಯ ಭದ್ರತೆಗೆ ಸರ್ಕಾರದಲ್ಲಿ ಹಣ ಡಿಪಾಜಿಟ್ ಮಾಡಿರುತ್ತೆ. ತಿಂಗಳಿಗೆ 1 ರೂಪಾಯಿಯ 8 ಆಣೆ ಪ್ರಕಾರ ರೂ 500, ರೂ 250 ಗಳಿಗೆ, ಪುರುಷರಿಗೂ ಸ್ತ್ರೀಯರಿಗೂ, ವೈದ್ಯಪರೀಕ್ಷೆ ಇಲ್ಲದೆ, ವಯಸ್ಸಿನ ಪ್ರತಿಬಂಧಕವಿಲ್ಲದೆ, ಜೀವವಿಮೆ ಮಾಡಲಾಗುತ್ತೆ. ಹೆಚ್ಚು ವಿಷಯಕ್ಕೂ, ಏಜೆಂಸಿಯ ಷರತ್ತಿಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮೈಸೂರು ಮತ್ತು ಕೊಡಗಿನ ಚೀಫ್ ಏಜೆಂಟ್
927 ಚಾಮರಾಜ ಪುರಂ, ಮೈಸೂರು.

ಕಾದಂಬರೀ ಸಂಗ್ರಹ

ಮನೋಹರವಾದ ಕರ್ನಾಟಕ ಮಾಸಪತ್ರಿಕೆ

ಚಾಮರಾಜನಗರ

THE

MYSORE PRESS

RAMAVILAS ROAD

MYSORE

We undertake to print

JOBS — BOOKS & PERIODICALS

Neat Workmanship

Moderate Charges

Prompt Execution

Colour & artistic work a speciality

Trial order solicited

B. S. MURTHY, B. A
Proprietor.

ಮೈಸೂರ್ ಪ್ರೆಸ್

ರಮಾವಿಲಾಸ ಅಗ್ರಹಾರ

ಮೈಸೂರು.

ನಮ್ಮಲ್ಲಿ ಎಲ್ಲಾ ವಿಧವಾದ ಚಿಕ್ಕ ಪುಟ್ಟ ಮುದ್ರಣ ಕಾರ್ಯವೂ, ಪುಸ್ತಕಗಳೂ, ಮಾಸಪತ್ರಿಕೆಗಳೂ ಸಕಾಲಕ್ಕೆ ಸುಲಭ ದರದಿಂದ ಮಾಡಲ್ಪಡುತ್ತೆ.

☞ ದಯವಿಟ್ಟು ಗಮನಿಸಿ:—

ನಮ್ಮ ಮುದ್ರಣವು ಬಹು ಅಂದ!

ನಮ್ಮ ಅಕ್ಷರವು ಬಲು ಚಂದ!!

ನಮ್ಮ ಕೆಲಸ ನೋಡುವವರಿಗೆ

ನೇತ್ರಾನಂದ

ಬಿ. ಎಸ್. ಮೂರ್ತಿ,
ಪ್ರೊಪ್ರೈಟರ್

Printed and Published by B. S. Murthy at the Mysore Press, Mysore and Proprietor.